




ಸಮಾರಂಭ ಮತ್ತು ಸಮಾರೋಪ ಸಮಾರಂಭವನ್ನು ಒಳಗೊಂಡಿದ್ದು ವಿಚಾರಗೋಷ್ಠಿಗಳು, ವಿಶೇಷೋಪನ್ಯಾಸ, ಸಂಸ್ಮರಣೆ, ಹಿರಿಯರ ಸ್ಮರಣೆ, ಶತಮಾನದ ನಮನ, ನಮ್ಮ ಕಥೆ–ನಿಮ್ಮ ಜೊತೆ ಕವಿಸಮಯ–ಕವಿನಮನಗಳನ್ನು ಒಳಗೊಂಡಿರುತ್ತದೆ. ಒಂದು ನಿಮಿಷವೂ ಬಿಡುವಿಲ್ಲದಂತೆ ಕಾರ್ಯಕ್ರಮಗಳು ನಡೆಯುತ್ತಿದ್ದು ನಿಗದಿತ ಸಮಯಕ್ಕೆ ಪ್ರಾರಂಭವಾಗಿ ನಿಗದಿತ ಸಮಯಕ್ಕೆ ಸಮಾಪನಗೊಳ್ಳುತ್ತವೆ. ಆಳ್ವಾಸ್ ನುಡಿಸಿರಿ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಸಾಹಿತ್ಯ–ಸಂಸ್ಕೃತಿ–ಕೃಷಿ–ಶಿಲ್ಪ–ಸಮಾಜಸೇವೆಯೇ ಮುಂತಾದ ವಿಭಾಗಗಳಲ್ಲಿ ಹೆಸರುವಾಸಿಯಾಗಿರುವ ಖ್ಯಾತನಾಮರನ್ನು 25,000 ನಗದಿನೊಂದಿಗೆ ಆಳ್ವಾಸ್ ನುಡಿಸಿರಿ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ. ಗಣನೀಯ ಸಾಧನೆ ಮಾಡಿದ ಕನ್ನಡ ಸಾಹಿತಿ–ವಿದ್ವಾಂಸರೊಬ್ಬರ ಸರ್ವಾಧ್ಯಕ್ಷತೆ ಸಮ್ಮೇಳನಕ್ಕೆ ಘನತೆ–ಗೌರವವನ್ನು ತಂದುಕೊಡುತ್ತದೆ. ಈಗಾಗಲೇ ಪ್ರೊ.ಬರಗೂರು ರಾಮಚಂದ್ರಪ್ಪ, ಡಾ.ಎಸ್.ಎಲ್.ಭೈರಪ್ಪ, ಡಾ.ಚಂದ್ರಶೇಖರ ಕಂಬಾರ, ಪ್ರೊ.ಜಿ.ವೆಂಕಟಸುಬ್ಬಯ್ಯ, ನಾಡೋಜ ಡಾ.ಚೆನ್ನವೀರ ಕಣವಿ, ಡಾ.ಹಂಪ ನಾಗರಾಜಯ್ಯ, ಶ್ರೀಮತಿ ವೈದೇಹಿ, ನಾಡೋಜ ಎಂ.ಎಂ.ಕಲಬುರ್ಗಿ, ನಾಡೋಜ ಕೆ.ಎಸ್.ನಿಸಾರ್ ಅಹಮದ್, ನಾಡೋಜ ಸಿದ್ದಲಿಂಗಯ್ಯ, ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರೀ, ಡಾ. ಬಿ ಎನ್ ಸುಮಿತ್ರಾಬಾಯಿ ಆಳ್ವಾಸ್ ನುಡಿಸಿರಿಯ ಸರ್ವಾಧ್ಯಕ್ಷರಾಗಿ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಿಕೊಟ್ಟಿದ್ದಾರೆ.

ಸಮ್ಮೇಳನಕ್ಕೆ ಬಂದ ಕಲಾಸಕ್ತರೆಲ್ಲರಿಗೂ 100 ರೂ. ಪ್ರತಿನಿಧಿ ಶುಲ್ಕದೊಂದಿಗೆ ಮೂರು ದಿನಗಳ ಕಾಲ ಊಟೋಪಚಾರ–ವಸತಿ ವ್ಯವಸ್ಥೆಯನ್ನು ಮಾಡಿಕೊಡಲಾಗುತ್ತದೆ. ಕನ್ನಡವನ್ನು ಕಟ್ಟುವ ಕಾರ್ಯದಲ್ಲಿ ಕಾರ್ಯದಲ್ಲಿ ಯುವಜನತೆ–ವಿದ್ಯಾರ್ಥಿಗಳ ಪಾತ್ರ ಮಹತ್ವದ್ದೆಂದು ಅರಿತಿರುವ ಸಂಸ್ಥೆ ವಿದ್ಯಾರ್ಥಿಗಳಿಗೆ ಶುಲ್ಕವಿನಾಯಿತಿ ನೀಡಿ ಉಚಿತವಾಗಿ ಸಮ್ಮೇಳನದಲ್ಲಿ ಭಾಗವಹಿಸುವ ಅವಕಾಶವನ್ನು ಕಲ್ಪಿಸಿದೆ. ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಆಳ್ವಾಸ್ ನುಡಿಸಿರಿ ಕಾರ್ಯಕ್ರಮಗಳಿಗಾಗಿ ಎದುರು ನೋಡುವ ಕನ್ನಡಾಭಿಮಾನಿಗಳ ತಂಡಗಳೇ ರಚನೆಯಾಗಿವೆ. ಒಂದೇ ವೇದಿಕೆಯಲ್ಲಿ ಕನ್ನಡದ ವಿಚಾರಗಳ ಚಿಂತನ ಮಂಥನಗಳು ನಡೆಯುತ್ತವೆ; ವೈಚಾರಿಕ–ಬೌದ್ಧಿಕ ಚರ್ಚೆಗಳು ನಡೆಯುತ್ತವೆ; ಇದರಲ್ಲಿ ಭಾಗವಹಿಸುವ ಹಾಗೂ ಕನ್ನಡ ಸಾಹಿತಿ–ಕಲಾವಿದರನ್ನು ಒಂದೇ ಕಡೆ ನೋಡುವ ಭಾಗ್ಯ ಕನ್ನಡ